ದಿನಾಂಕ 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಬಿ.ಎಸ್.ಡಿ ವಕೀಲರಿಂದಃ**

ನನ್ನ ಹೆಂಡತಿಯ ಹೆಸರು ಪಾರ್ವತಿ ಎಂದರೆ ಸರಿ. ಅವರ ಹೆಸರಿನಲ್ಲಿ ಊರಿನಲ್ಲಿ ಜಮೀನು ಇತ್ತು. ಅವರ ಹೆಸರಿನಲ್ಲಿ ಸ ನಂಃ 160/1 ಅ ಇತ್ತು. ಸದರಿ ಜಮೀನು ಈಗ ಶಿಲ್ಪಾ ಸಚಿನ್ ಭೋಸ್ಲೆ ಅವರ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನ ಚಕ್ಕುಬಂದಿಗಳು ನನಗೆ ಗೊತ್ತು. ಉತ್ತರಕ್ಕೆ-ವೀರಪ್ಪ ನಾಗೋಜಿ ಅವರ ಜಮೀನು (ನನ್ನ ಜಮೀನು ಆಗಿರುತ್ತದೆ). ಸದರಿ ಜಮೀನಿನ ಸ ನಂಃ 155/6 ಆಗಿರುತ್ತದೆ. ಅದೇ ರೀತಿ ಸ ನಂಃ 160/1 ಅ ಗೆ ಸ ನಂಃ 164 ಸಹ ಉತ್ತರ ದಿಕ್ಕಿನಲ್ಲಿ ಬರುತ್ತದೆ. ಸ ನಂಃ 164/1 ರಲ್ಲಿ 2 ಎಕರೆ 15 ಗುಂಟೆ ಜಮೀನು ಮಧು ನಾಗೋಜಿ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

2. ಸ ನಂಃ 164 ಎತ್ತರ ಪ್ರದೇಶದಲ್ಲಿ ಇರುತ್ತದೆ ಅದೇ ರೀತಿ ನನ್ನ ಜಮೀನು ಸಹ ಎತ್ತರ ಪ್ರದೇಶದಲ್ಲಿ ಇರುತ್ತದೆ ಎಂದರೆ ಸರಿ. ಸ ನಂಃ 164 ರಲ್ಲಿ ಕೆಲವು ಹಿಸ್ಸೆದಾರರು ಅಡಿಕೆ ತೋಟಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಸ ನಂಃ 164 ರಲ್ಲಿ ಮಧು ನಾಗೋಜಿ ಅವರು ಸಹ ಅಡಿಕೆ ತೋಟವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಎತ್ತರದ ಸ ನಂಃ 164 ರ ಜಮೀನಿನಿಂದ ನೀರು ಹರಿದು ಬಂದು ನಮ್ಮ ಜಮೀನಾದ ಸ ನಂಃ 160/1 ಅ ಮೂಲಕ ಹೋಗುತ್ತದೆ ಎಂದರೆ ಸರಿ. ನಾವು ಪದೇ ಪದೇ ಸ ನಂಃ 164 ಗೆ ಹೋಗಿ ಅಲ್ಲಿಂದ ನೀರು ಹರಿಯಬಾರದು ಎಂದು ತಡೆದು ನಮ್ಮ ಹಾಗೂ ಅವರ ನಡುವೆ ಜಗಳ ತಂಟೆ ಆಗಿರುತ್ತದೆ ಎಂದರೆ ಸರಿ. ಈ ಬಗ್ಗೆ ಊರಿನಲ್ಲಿ ಪಂಚಾಯಿತಿ ಕೂಡಾ ಆಗಿರುತ್ತದೆ ಎಂದರೆ ಯಾವುದೇ ಆಗಿರುವುದಿಲ್ಲ. ನೀರಿನ ಸಂಬಂಧವಾಗಿ ನಮ್ಮಲ್ಲಿ ಜಗಳ ಆದ ಮಧು ನಾಗೋಜಿ ಅವರನ್ನು ನೋಡಿದರೆ ನನಗೆ ಆಗುವುದಿಲ್ಲ ಎಂದರೆ ಹೌದು, ಯಾವಾಗಲೂ ಸಹ ಆಗುವುದಿಲ್ಲ.

- 5 -

3. ಯಲ್ಲಪ್ಪ ತೋಪಣ್ಣ ನಾಗೋಜಿ ಅವರನ್ನು ನಾನು ನೋಡಿರುತ್ತೇನೆ. ಅವರ ಹೆಂಡತಿ ಮರಿಯವ್ವ ಯಲ್ಲಪ್ಪ ನಾಗೋಜಿ ಎಂದರೆ ಸರಿ. ಅವರು ಈಗ ಮರಣ ಹೊಂದಿರುತ್ತಾರೆ.

ಸದರಿಯವರಿಗೆ ಎಷ್ಟು ಮಕ್ಕಳು ಇದ್ದವು ಎಂಬ ಬಗ್ಗೆ ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. ಯಲ್ಲಪ್ಪ ನಾಗೋಜಿ ಅವರಿಗೆ ಕುಬೇರಪ್ಪ, ಸಾತವೀರಪ್ಪ, ಈಶ್ವರಪ್ಪ, ಬಸವಂತಪ್ಪ, ಸುಭಾಷ, ಶಂಕ್ರಪ್ಪ, ತೋಪಣ್ಣ, ಸರಸ್ವತಿ, ಸುನಂದವ್ವ ಹಾಗೂ ಸೌಭಾಗ್ಯ ಎಂಬುವವರು ಮಕ್ಕಳು ಇದ್ದರು ಎಂದರೆ ಸರಿ. ಈ ಎಲ್ಲಾ ಮಕ್ಕಳಲ್ಲಿ ಸುಭಾಷ ಎಂಬುವವರು ಮಾತ್ರ ನೌಕರಿಯನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಅವರಿಗೆ ಎಷ್ಟು ವಯಸ್ಸಿನಲ್ಲಿ ಸರಕಾರಿ ನೌಕರಿ ಸಿಕ್ಕಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅವರು ನೇಮಕಾತಿ ಆದ ನಂತರ ಶಿರಸಿಯಲ್ಲಿ ಕೆಲಸವನ್ನು ಮಾಡಿರುತ್ತಾರೆ. ಸುಭಾಷ ಅವರು ಊರಿಗೆ ಬರುವುದು ಹೋಗುವುದು ಮಾಡುತ್ತಿದ್ದರು, ಅವರು ಯಾವ ಯಾವ ಊರಿನಲ್ಲಿ ಕೆಲಸ ಮಾಡಿರುತ್ತಾರೆ ಎಂಬ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನೌಕರಿಗೆ ಸೇರಿದ ನಂತರ 2-3 ಬಾರಿ ಸುಭಾಷ ಅವರು ತಮ್ಮ ವ್ಯವಹಾರಗಳ ಬಗ್ಗೆ ನಮಗೆ ತಿಳಿಸಿರುತ್ತಾರೆ. ಅವರು ಶಿರಸಿ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿರುವ ಬಗ್ಗೆ ನನಗೆ ಹೇಳಿರುವುದಿಲ್ಲ. ಶಿರಸಿಯಲ್ಲಿ ಇದ್ದಂತಹ ಮನೆ ಅವರ ಮೂಲತಃ ಮನೆ ಆಗಿರುತ್ತದೆ ಅಥವಾ ಹೊಸದಾಗಿ ಕಟ್ಟಿರುವ ಮನೆ ಆಗಿರುತ್ತದೆ ಎಂದರೆ ಅವರು ಹೊಸದಾಗಿ ಕಟ್ಟಿರುವ ಮನೆ ಆಗಿರುತ್ತದೆ. ಆ ಸೈಟು ಯಾವಾಗ ತೆಗೆದುಕೊಂಡಿರುತ್ತಾರೆ, ಮನೆಗೆ ಸಂಬಂಧಿಸಿದಂತೆ ಯಾವ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ ಹಾಗೂ ಸದರಿ ಮನೆಯ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸಿರುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸುಭಾಷ ಅವರು ತಮ್ಮ ವ್ಯವಹಾರಗಳ ಬಗ್ಗೆ ನನಗೆ ಯಾವುದೇ ಮಾಹಿತಿಯನ್ನು ತಿಳಿಸಿರುವುದಿಲ್ಲ ಎಂದರೆ ಅವರ ಹೊಲ ಪಕ್ಕದಲ್ಲಿ ಇದ್ದಿದ್ದರಿಂದ ಹೊಲದ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತಿದ್ದರು, ಉಳಿದಂತಹ ವ್ಯವಹಾರಗಳ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

4. ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿದಂತೆ 1987 ರಲ್ಲಿ ಆದಂತಹ ಹಿಸ್ಸಾದಲ್ಲಿ ನಾನು ಭಾಗವಹಿಸಿರುವುದಿಲ್ಲ. ಆ ರೀತಿ ವ್ಯವಹಾರ ಆಗಿರುವ ಬಗ್ಗೆ ನನಗೆ ಏನಾದರೂ ಮಾಹಿತಿ ಇತ್ತಾ ಎಂದರೆ ಇಲ್ಲ. ಸದರಿ ಹಿಸ್ಸೇ ಪ್ರಕಾರ ಸ ನಂಃ 167 ಸುಭಾಷ



ನಾಗೋಜಿ ಅವರ ಹಿಸ್ಸೇಗೆ ಹೋಗಿರುತ್ತದೆ. 1987 ರಲ್ಲಿ ಸದರಿ ಸ ನಂಃ167 ರ ವಿಸ್ತೀರ್ಣ ಎಷ್ಟು ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ಹೆಣ್ಣು ಮಕ್ಕಳಿಗೆ ಪಾಲು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1987 ರಲ್ಲಿ ಆದಂತಹ ಹಿಸ್ಸಾ ವಿಭಾಗ ಆಪಸಾತ್ತಿನಲ್ಲಿ ಹಿಡುವಳಿಗಳನ್ನು ತೋರಿಸಲು ಮಾತ್ರ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆಪಸಾತ್ ಹಿಡುವಳಿಗಳನ್ನು ತೋರಿಸಲು ಮಾತ್ರ ಹಿಸ್ಸಾ ಮಾಡಿಕೊಂಡಿದ್ದರಿಂದ 2 ಎಕರೆ 15 ಗುಂಟೆ ಜಮೀನಿನಲ್ಲಿ ಸುಭಾಷ ರವರು ಯಾವತ್ತೂ ಸಹ ಸಾಗುವಳಿಯನ್ನು ಮಾಡಿಕೊಂಡಿರುವುದಿಲ್ಲ ಎಂದರೆ

ಸರಿಯಲ್ಲ. ಇವತ್ತಿಗೂ ಸಹ ಸದರಿ ಜಮೀನಿನಲ್ಲಿ ಮಧು ನಾಗೋಜಿ ಅವರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.ನನಗೂ ಹಾಗೂ ಮಧು ನಾಗೋಜಿ ಅವರ ನಡುವೆ ನೀರಿನ ವಿಚಾರವಾಗಿ ಜಗಳ ಆಗಿದ್ದರಿಂದ ಅವರು ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಬಂದಿದ್ದರೂ ಸಹ ಇಲ್ಲ ಎಂದು ಮಾನ್ಯ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿದ 2019 ರಲ್ಲಿ ರೂ.2,50,000/- ಗಳನ್ನು 1 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯವರಿಂದ ಪಡೆದುಕೊಂಡಿದ್ದು, ಸದರಿ ವ್ಯವಹಾರ ನನ್ನ ಸಮಕ್ಷಮದಲ್ಲಿ ಆಗಿರುತ್ತದೆ. ಸದರಿ ನೋಟುಗಳ ಮುಖ ಬೆಲೆ 100, 500, 1000 ಹಾಗೂ 200 ಗಳು ಇದ್ದವು. ಸದರಿ ಹಣವನ್ನು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಎಷ್ಟು ಗಂಟೆಗೆ ಕೊಟ್ಟಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಸದರಿ ವ್ಯವಹಾರ ದಿಃ 21-05-2019 ರಂದು ನಡೆದಿರುತ್ತದೆ. ಸದರಿ ವ್ಯವಹಾರ ನಡೆದ ನಂತರ ನಾನು ನನ್ನ ಮನೆಗೆ ಬಂದಿರುತ್ತೇನೆ. ಎಲ್ಲರೂ ತಮ್ಮ ತಮ್ಮ ಕೆಲಸಕ್ಕೆ ಹೋಗಿರುತ್ತಾರೆ.

6. ದಿಃ 21-05-2019 ರಂದು ದಿನಾಂಕವನ್ನು ಹೊರತುಪಡಿಸಿ ಬೇರೆ ಯಾವುದೇ ದಿನ ಸುಭಾಷ ಅವರ ಜೊತೆಯಲ್ಲಿ ನಾನು ಹಾನಗಲ್ಲನ ಸಬ್ ರಿಜಿಸ್ಟ್ರಾರ್ ಕಛೇರಿಗೆ ಬಂದಿರುವುದಿಲ್ಲ. ರೂ.2,50,000/- ಗಳನ್ನು 100, 500, 1000 ಹಾಗೂ 200 ಗಳ ಮುಖ ಬೆಲೆ ಮುಖಾಂತರ 1 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯವರಿಂದ ಪಡೆದುಕೊಂಡಿರುತ್ತಾರೆ ಎಂದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.



ನಿ.ಪಿ-13 ದಾಖಲೆ ಪ್ರಕಾರ ಸದರಿ ಹಣವನ್ನು ಎಸ್ ಬಿ ಐ ಬ್ಯಾಂಕಿನ ಚೆಕ್ ಮುಖಾಂತರ ನೀಡಲಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

7. 1 ನೇ ಪ್ರತಿವಾದಿಯವರು ಜಮೀನಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಿ.ಪಿ-13 ಪ್ರಕಾರ ರೂ.2,00,000/- ಗಳನ್ನು ಚೆಕ್ ಮುಖಾಂತರ ಹಾಗೂ ರೂ.50,000/- ನಗದು ಹಣವನ್ನು 1 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯವರಿಂದ ಈ ಹಿಂದೆ ಪಡೆದುಕೊಂಡಿರುತ್ತಾರೆ ಎಂದರೆ ಸದರಿ ಪತ್ರವನ್ನು ಅವರು ಭದ್ರತೆಗಾಗಿ ಮಾಡಿಕೊಟ್ಟಿರು ತ್ತಾರೆ. ದಿಃ 21-05-2019 ಆದ ನಂತರ ಸದರಿ ಪತ್ರ ಯಾವಾಗ ಆಗಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಪತ್ರಕ್ಕೆ ನಾನು ಸಹಿಯನ್ನು ಮಾಡಿರುವುದಿಲ್ಲ. ನಿ.ಪಿ-13 ರಲ್ಲಿ ಕಾಣಿಸುತ್ತಿರುವ ಐ ಎಸ್ ನಾಗೋಜಿ ಎಂಬುವವರ ಸಹಿ ನನ್ನದೇ ಸಹಿ ಆಗಿರುತ್ತದೆ. ಸದರಿ ಸಹಿಯನ್ನು ನಾನು ಸುಮಾರು ಒಂದು ವಾರ ಆದ ನಂತರ ಸಹಿ

ಮಾಡಿರುತ್ತೇನೆ. ಪತ್ರ ಆದ ಒಂದು ವಾರದ ನಂತರ ಸದರಿ ಸಹಿಯನ್ನು ಮಾಡಿರುತ್ತೇನೆ. ಸದರಿ ಪತ್ರ ನೋಂದಾಯಿತ ಪತ್ರ ಆಗಿರುತ್ತದೆ, ಅದು ದಿಃ 21-05-2019 ರಂದು ಮಧ್ಯಾಹ್ನ 4.14 ನಿಮಿಷ 38 ಸೆಂಕೆಂಡ್ ಸಮಯಕ್ಕೆ ಆಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪತ್ರ ಖರೀದಿ ಪತ್ರ ಆಗಿದ್ದರೂ ಸಹ ಅದನ್ನು ಕೈ ಸಾಲಗಳಿಗೆ ಭದ್ರತೆಗಾಗಿ ನೀಡಲಾಗಿರುವ ಪತ್ರ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಧು ಹಾಗೂ ಅವರ ಕುಟುಂಬದವರು ತೆಗೆದುಕೊಳ್ಳಲು ಮುಂದೆ ಬಂದಾಗ ಅವರಿಗೆ ಕೊಡಬಾರದು ಎಂದು 2 ನೇ ಪ್ರತಿವಾದಿಯವರಿಗೆ ಈ ರೀತಿ ಪತ್ರವನ್ನು ಮಾಡಿಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರವನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿ ಪರವಾಗಿ ರೂ.4,88,000/- ಗಳಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಇವತ್ತೂ ಸಹ ಸುಭಾಷ ಅವರ ಅಣ್ಣ ತಮ್ಮಂದಿರ ಜಮೀನನ್ನು ರೂ.4,88,000/- ಗಳಿಗೆ ಖರೀಧಿಸಲು ತಯಾರು ಇದ್ದರೂ ಸಹ ಅವರಿಗೆ ಕೊಡಬಾರದು ಎಂದು ನಾನು 1 ಮತ್ತು 2 ನೇ ಪ್ರತಿವಾದಿಗಳ ಜೊತೆಯಲ್ಲಿ ಶಾಮೀಲಾಗಿ ಸದರಿ ಪತ್ರ ಕೈ ಸಾಲಗಳಿಗೆ ಭದ್ರತೆಗಾಗಿ ಮಾಡಿರುವ ಪತ್ರವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ